## ಪದಬಂಧ




ಎಡದಿಂದ ಬಲಕ್ಕೆ:

1. ಹಡೆ ಎತ್ತದಂತೆ ಮಾಡಲು ಹೀಗೆ ಏಟು ಹಾಕುವುದೇ? 3
3. ಶಾಶ್ವತ ವಾಸ್ತವ್ಯವನ್ನು ಹೂಡಲು ತಕ್ಕಂತಿದೆ ಈ ಮನೆ 3
4. ಆ ಕಾರಂಜಿಯ ದೃಶ್ಯ ತುಂಬ ಮನೋಲ್ಲಾಸ ತರುವಂತಿದೆ 3
6. ತೊಗರಿ ಸಾಗಿಸಲು ಬಳಸಿದ ಬಂಡಿಯನ್ನು ಎಳೆದದ್ದು ಇದೇ ಕುದುರೆ 3
7. ಅಪಾಯದ ಕೆಲಸವೆಂಬುದು ಅರ್ಥವೇ ಆಗದಂಥ ಮುಗ್ಧ 4
9. ಉದ್ದೇಶ ಕೈಗೂಡಲಿಲ್ಲವೆಂದು ರಾಷ್ಟ್ರವನ್ನೇ ತೊರೆಯುವುದೇ? 4
11. ಕಾತರದ ತೋರಿಕೆಗೆಂದು ಈ ರೀತಿಯ ಅವಸರ 4
13. ನೋವನ್ನು ಕಡಿಮೆ ಮಾಡುವ ಹೀಗೊಂದು ಹೊಸ ರೀತಿ 4
15. ಇದು ಅಮೂಲ್ಯ ಹರಳೆಂಬ ಮಾತಿನಲ್ಲಿ ಎಲ್ಲಿದೆ ಸತ್ವ? 3
17. ಜ್ವರ ಇರುವವರೆಗೂ ಬೇಕಾದೀತು ಇಂಥ ದಪ್ಪನ್ನ ಹೊದಿಕೆ 3
18. ಸೌಮ್ಯ ಮನೋಭಾವ ಇದ್ದರೆ ಮಾತ್ರ ಸದಾ ಹಿಗ್ಗು, ಸಂತಸ 3
19. ಲಕ್ಷ ಲಕ್ಷಗಳನ್ನೂ ಲೆಕ್ಕಿಸದೆ ಇದ್ದದ್ದಕ್ಕೆ ಇಂತಹ ಭಾರೀ ನಷ್ಟ 3

ಮೇಲಿಂದ ಕೆಳಕ್ಕೆ:

1. ಹಸ್ತಲಾಘವದ ಈ ಕ್ರಮ ಇತ್ತೀಚಿನದು ತಾನೇ? 3
2. ತೇರಿಗೆಂದು ಬಂದವರ ಗದ್ದಲದ ಅಲೆ ಅಲೆ 3
3. ನಾಣ್ಯಗಳನ್ನೆಲ್ಲ ವರ್ಣಮಯವಾಗಿಸಬೇಕೆಂದು ತೀರ್ಮಾನವಾಗಿದೆ 3
5. ಶರ್ಕರಕ್ಕಾಗಿ ನಡೆದ ಕೂಗಾಟ ಕರ್ಣ ಕಠೋರ 3
7. ಅವರಿವರಿಂದ ತರಿಸಿದ ನೆರವು ನಿರಂತರ 4
8. ಕಲಹ ಪ್ರಿಯರಿಗೆ ತಕ್ಕದ್ದು ಆಫ್ರಿಕಾದ ಈ ಮರುಭೂಮಿ 4
9. ದಿವಸವನ್ನೆಲ್ಲ ನೆಮ್ಮದಿಯಿಂದ ಕಳೆಯಲು 'ಭಗವಂತನ ಜಾಗ'ವೇ ಸರಿ 4
10. ಗಾಡಿಗಳನ್ನು ಮಾಡಿ ಮಾರುವವರದು ದೇಶದಂಚಿನ ಹಳ್ಳಿ 4
12. ತುಸು ಶಾಂತವಾಗಿರಲು ನೆರವಾಯಿತು ಮಂಜಿನ ಹನಿ 3
14. ವೈಷಮ್ಯವನ್ನು ಮುಂದುವರಿಸಿದರೆ ಬರೀ ದುಃಖ 3
15. ಹುಲಿಯನ್ನು ಕಂಡೊಡನೆ ಭಾರೀ ಕೂಗಾಟ, ಗದ್ದಲ 3
16. ನಳನಳಿಸುವ ತೋಟದೊಳಕ್ಕೆ ತಲೆಕೆಳಕಾಗಿಯಾದರೂ ತೂರಿಕೋ 3

---

### 29-8-2019 ಉತ್ತರಗಳು

ಎಡದಿಂದ ಬಲಕ್ಕೆ:

1. ಅಸಂಭವ 3. ಪೇಲವ 4. ಣೆರಾಗು (=ಗುರಾಣಿ ಹಿಂದುಮುಂದು) 6. ನಿರರ್ಥಕ 7. ಕುಸುಮ 9. ಇನಿಯ 1. ಲಕ್ಷಿಸು 13. ನಿರಾಳ 15. ತರದೂದು 17. ಜತನ 18. ಸ್ಥಿಮಿತ 19. ಯಥಾಸ್ಥಿತಿ

ಮೇಲಿಂದ ಕೆಳಕ್ಕೆ:

1. ಅವನಿ 2. ವಣಿಕ 5. ಗುಮಾನಿ 7. ಕುಶಲ 8. ಮರೆಸು 9. ಇಬ್ಬನಿ 10. ಯಮಳ 12. ಕ್ಷಿತಿಜ 14. ರಾಹುತ 15. ತನಯ 16. ದುಸ್ಥಿತಿ

ಪ್ರಶ್ನಾ ಂಕಣ

# ವಿಕ್ಟೋರಿಯಾ ಜಲಪಾತ: ಏನು ಅದ್ಭುತ?

ವಿಕ್ಟೋರಿಯಾ ಜಲಪಾತ. ಅದು ನಿಸರ್ಗದ ಒಂದು ಅತ್ಯಂತ ರುದ್ರ, ರಮ್ಯ ಸೃಷ್ಟಿ. ಆಫ್ರಿಕಾ ಖಂಡದ (ಚಿತ್ರ1) ದಕ್ಷಿಣಾರ್ಧದಲ್ಲಿ ಇರುವ ಜಿಂಬಾಬ್ವೆ ಮತ್ತು ಜಾಂಬಿಯಾ ದೇಶಗಳ ನಡುವಣ ಗಡಿಯಲ್ಲಿರುವ ಈ ಜಲಪಾತ 'ಧರೆಯ ಸಪ್ತ ನೈಸರ್ಗಿಕ ಮಹದದ್ಭುತ'ಗಳ ಪಟ್ಟಿಯಲ್ಲಿದೆ; ಯುನೆಸ್ಕೋದ ವಿಶ್ವ ಪಾರಂಪರಿಕ ತಾಣಗಳ ಪಟ್ಟಿಯಲ್ಲಿದೆ ಕೂಡ.

ಆಫ್ರಿಕಾದ ಪ್ರಧಾನ ನದಿಗಳಲ್ಲಿ (ನೈಲ್, ಕಾಂಗೊ, ನೈಜರ್ ನಂತರದ) ನಾಲ್ಕನೆಯ ಸ್ಥಾನದಲ್ಲಿರುವ 'ಜಾಂಬೇಜೀ' ನದಿ ಈ ಜಲಪಾತವನ್ನು ಸೃಷ್ಟಿಸಿದೆ. ಇಸವಿ 1855ರ ನವೆಂಬರ್ 16ರವರೆಗೆ ಈ ಜಲಪಾತದ ಅಸ್ತಿತ್ವ ಹೊರ ಜಗತ್ತಿಗೆ ತಿಳಿದಿರಲೇ ಇಲ್ಲ! ಆ ದಿನ ಈ ಜಲಪಾತವನ್ನು ಕಂಡ ಸ್ಕಾಟ್ಲೆಂಡ್ ನ ಪಾದ್ರಿ ಮತ್ತು ಅನ್ವೇಷಕ ಡೇವಿಡ್ ಲಿವಿಂಗ್ ಸ್ಟೋನ್ ಇದಕ್ಕೆ ಆಗಿನ ಇಂಗ್ಲೆಂಡ್‌ನ ರಾಣಿ ವಿಕ್ಟೋರಿಯಾಳ ಹೆಸರನ್ನೇ ಇಟ್ಟ. ಆದರೆ ಅಲ್ಲಿನ ಸ್ಥಳೀಯ ಜನ ಈ ಜಲಪಾತವನ್ನು ಈಗಲೂ 'ಗುಡುಗುವ ಮೋಡ' ಎಂದೇ ಗುರುತಿಸುತ್ತಾರೆ.

ವಾಸ್ತವವಾಗಿ ಅದೇ ತುಂಬ ಸಮಂಜಸವಾದ, ರೂಪಾನ್ವಯವೂ ಆದ ಹೆಸರು. ಏಕೆಂದರೆ, ಜಾಂಬೇಜೀ ನದಿ 1.7 ಕಿಲೋಮೀಟರ್ ಉದ್ದದ ಬಂಡೆ ಗೋಡೆಯ ಮೇಲಿಂದ ಅದೇ ಗೋಡೆಯ ಬುಡದ 100 ಮೀಟರ್ ಆಳದ ಕೊರಕಲಿಗೆ ಧುಮುಕುತ್ತದೆ (ಚಿತ್ರ 2, 3). ಹಾಗಾಗಿ 1.7 ಕಿಲೋಮೀಟರ್ ಉದ್ದದ ಮತ್ತು 100 ಮೀಟರ್ ಎತ್ತರದ 'ನೀರಿನ ಪರದೆ'ಯಂತೆ ಈ ಜಲಪಾತ ಗೋಚರಿಸುತ್ತದೆ. ಮಳೆಗಾಲದಲ್ಲಂತೂ ಪ್ರತಿ ಸೆಕೆಂಡ್‌ಗೆ ಸುಮಾರು ಹತ್ತು ಕೋಟಿ ಲೀಟರ್‌ನಷ್ಟು ಪ್ರಮಾಣದಲ್ಲಿ




ಧುಮುಕುವ ಈ ನೀರಿನ ಭೋರ್ಗರೆತ 40 ಕಿಲೋಮೀಟರ್ ದೂರದವರೆಗೂ ಕೇಳಿಸುತ್ತದೆ; ಅಲ್ಲಿ ಮೈದಳೆವ ತುಂತುರು 400 ಮೀಟರ್ ಎತ್ತರ ಮುಟ್ಟುತ್ತದೆ; ದಟ್ಟ ಮಂಜಿನ ಮೋಡದಂಥ ಈ ದೃಶ್ಯ 50 ಕಿಲೋಮೀಟರ್ ದೂರಕ್ಕೇ ಗೋಚರಿಸುತ್ತದೆ. ಇಷ್ಟು ಉದ್ದದ, ಇಷ್ಟು ವಿಸ್ತಾರದ, ಇಷ್ಟು ಸಪ್ಪಳದ, ಇಷ್ಟು ಎತ್ತರಕ್ಕೆ ತುಂತುರು ಮೂಡಿಸುವ ಜಲಪಾತ ಇಡೀ ಜಗತ್ತಿನಲ್ಲೇ ಇನ್ನಾವುದೂ ಇಲ್ಲ. ಈ ದಾಖಲೆಗಳೇ ವಿಕ್ಟೋರಿಯಾ ಜಲಪಾತದ ಅನನ್ಯ ಅದ್ಭುತ.

ವಿಕ್ಟೋರಿಯಾ ಜಲಪಾತದ ವಿಸ್ಮಯ ವೈಭವಗಳನ್ನು ಮನಗಂಡಿರುವ ಜಿಂಬಾಬ್ವೆ ಮತ್ತು ಜಾಂಬಿಯಾ ರಾಷ್ಟ್ರಗಳು ಈ ಜಲಪಾತದ ಸಂರಕ್ಷಣೆಗಾಗಿ ಅದರ ಸುತ್ತಲಿನ ಸಾಕಷ್ಟು ಪ್ರದೇಶವನ್ನು ಹಲವು ರಾಷ್ಟ್ರೀಯ ಉದ್ಯಾನಗಳನ್ನಾಗಿ ರೂಪಿಸಿವೆ. ಅಲ್ಲಿನ ಪ್ರಧಾನ ಜೀವಾವಾರವಾಗಿ ವೈವಿಧ್ಯಮಯ ವನ್ಯಜೀವಿಗಳ ಆಶ್ರಯ ತಾಣವಾಗಿರುವ ಅಲ್ಲಿನ ಹುಲ್ಲು ಬಯಲುಗಳನ್ನು ಸುರಕ್ಷಿತವಾಗಿ ಕಾಯ್ದುಕೊಂಡಿವೆ. ಈ ಮಹದದ್ಭುತದ ಜಲಪಾತವನ್ನು ವೀಕ್ಷಿಸ ಹೋಗುವ ಪ್ರವಾಸಿಗಳ ಸಂಖ್ಯೆ ಪ್ರಸ್ತುತ ಪ್ರತಿ ವರ್ಷಕ್ಕೆ ಹತ್ತು ಲಕ್ಷ ಮುಟ್ಟಿದೆ!

■ ಎನ್. ವಾಸುದೇವ್